# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.

## ಸಿ.ಸಿ. ನಂ. 43/2019.

**ಪಿ ಡಬ್ಲ್ಯೂಃ 1**

**ದಿನಾಂಕಃ 29-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಆರೋಪಿ ಪರ ಶ್ರೀ ಹೆಚ್.ಎಸ್.ಜೆ. ವಕೀಲರಿಂದಃ**

ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ಒದಗಿಸಿರುತ್ತೇನೆ. 2016 ನೇ ಸಾಲಿನಲ್ಲಿ ನಾನು ದೂರುದಾರ ಸೊಸೈಟಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೆ. ನಾನು ದೂರುದಾರ ಸೊಸೈಟಿಯ ಪರವಾಗಿ ದಾಖಲಿಸಿದ ಬೇರೆ ಬೇರೆ ಪ್ರಕರಣದಲ್ಲಿ ಸಾಕ್ಷ್ಯ ನುಡಿದಿರುತ್ತೇನೇ ಎಂದರೆ ಸಾಕ್ಷಿ ಸದರಿ ಪ್ರಕರಣಗಳು ರಾಜಿ ಆಗಿರುತ್ತವೆ ಎನ್ನುತ್ತಾರೆ. ಸಿ.ಸಿ.ನಂ. 37/2019 ರಲ್ಲಿ ನಾನು ಸಾಕ್ಷ್ಯ ನುಡಿದಿದ್ದು ಅದರಲ್ಲಿ 2016 ನೇ ಸಾಲಿನಲ್ಲಿ ದೂರುದಾರ ಸೊಸೈಟಿಯಲ್ಲಿ ನಾನು ಗುಮಾಸ್ತನಾಗಿ ಅಕ್ಕಿ ಹಾಗೂ ಗೋಧಿಯನ್ನು ವಿತರಣೆ ಮಾಡಿರುತ್ತೇನೆ ಎಂದು ಹೇಳಿರುತ್ತೇನೆ. ಸದರಿ ವ್ಯವಹಾರ 2016 ನೇ ಸಾಲಿನಲ್ಲಿ ನಡೆದಿರುವುದರಿಂದ ಆರೋಪಿತರು ಯಾವ ಕಾರಣಕ್ಕಾಗಿ ಎಷ್ಟು ಸಾಲ ಪಡೆದಿದ್ದರು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೈನುಗಾರಿಕೆ ಸಲುವಾಗಿ ಸಾಲ ಪಡೆದಿದ್ದರು. ಆರೋಪಿತರು ಹೈನುಗಾರಿಕೆಗಾಗಿ ಸಾಲ ಪಡೆದಿದ್ದರು ಎಂದು ದೂರಿನಲ್ಲಿ ನಮೂದಿಸಿಲ್ಲ. ಅದೇರೀತಿ ಸದರಿ ವಿಷಯವನ್ನು ನಾನು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿ.

02. ಸದರಿ ಸಾಲ ಪಡೆಯುವ ಸಮಯದಲ್ಲಿ 1 ಮತ್ತು 2 ನೇ ಆರೋಪಿತರು ಸ್ವಸಹಾಯ ಗುಂಪಿನ ಪ್ರತಿನಿಧಿ-1 ಮತ್ತು 2 ಅನುಕ್ರಮ ಆಗಿದ್ದರಿಂದ ಅವರು ತಲಾ 2 ಚೆಕ್ಕುಗಳನ್ನು ಸದರಿ ಸಾಲದ ಬಾಬ್ತು ಪಡೆದಿದ್ದೆವು. ಸದರಿ ಆರೋಪಿತರ ಸ್ವಸಹಾಯ ಸಂಘ ನೊಂದಣಿಯಾದ ಬಗ್ಗೆ ಪ್ರತಿಯನ್ನು ನಮಗೆ ಆರೋಪಿತರು ನೀಡಿರಲಿಲ್ಲ. ಸದರಿ ಆರೋಪಿತರ ಸ್ವಸಹಾಯ ಸಂಘ ಇದೆ ಎಂದು ಅವರು ತಂದಿದ್ದ ಸಿಲುಗಳ ಆಧಾರದ ಮೇಲೆ ನಾವು ಖಚಿತಪಡಿಸಿಕೊಂಡಿರುತ್ತೇವೆ. ಬೇರೆ ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ನಮ್ಮ ಬ್ಯಾಂಕಿಗೆ ಅವರು ಸಾಲಕ್ಕಾಗಿ ಸಲ್ಲಿಸಿದ ಅರ್ಜಿಗಳನ್ನು ನಾವು ಅವರ ಸ್ವಸಹಾಯ ಗುಂಪಿನ ಸಿಲುಗಳನ್ನು ಹಾಕಿಕೊಂಡು ಅವರ ಸಹಿಗಳನ್ನು ಪಡೆದುಕೊಂಡಿರುತ್ತೇವೆ. ಸದರಿ ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸದರಿ ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

03. ದೂರುದಾರ ಸೊಸೈಟಿಯಲ್ಲಿ ನಾನು 4 ವರ್ಷಗಳಿಂದ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಕಳೆದ 10 ವರ್ಷಗಳಿಂದ ದೂರುದಾರ ಸೊಸೈಟಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ಬರೆಯಿಸಿರುತ್ತೇನೆ ಎಂದರೆ ನೆನಪಿಲ್ಲ. ಸದರಿ ದೂರುದಾರ ಸೊಸೈಟಿಯ ಮಾನ್ಯೇಜರ್ ಆಗಿ ನಾನು ಕಾರ್ಯ ನಿರ್ವಹಿಸುತ್ತಿದ್ದೇನೆ ಎಂದು ತೋರಿಸಲು ಸದರಿ ಸೊಸೈಟಿಯ ಆಡಳಿತ ಮಂಡಳಿಯ ಠರಾವನ್ನು ಹಾಜರು ಪಡಿಸಿರುತ್ತೇನೆ. ಸದರಿ ಠರಾವನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿ. ನಾನು ದೂರುದಾರ ಸೊಸೈಟಿಯ ಮ್ಯಾನೇಜರ ಅಲ್ಲ ಎಂದರೆ ಸರಿಯಲ್ಲ. ಹಾಗೂ ನಾನು ಸದರಿ ಸಂಸ್ಥೆಯಲ್ಲಿ 10 ವರ್ಷಗಳಿಂದ ದೂರುದಾರ ಸೊಸೈಟಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ.

04. ದಿನಾಂಕಃ 29.01.2019 ರಂದು 1 ಮತ್ತು 2 ನೇ ಆರೋಪಿತರು ತಮ್ಮ ಚೆಕ್ಕುಗಳನ್ನು ನಮಗೆ ನೀಡಿದ್ದರು. ಸದರಿ ಆರೋಪಿತರು ತಲಾ ರೂ.1,20,300/- ಗಳಿಗೆ ತಮ್ಮ ಚೆಕ್ಕುಗಳನ್ನು ನೀಡಿದ್ದರು. ಸದರಿ ಈ ಪ್ರಕರಣದಲ್ಲಿ ಹಾಜರು ಪಡಿಸಿದ ಚೆಕ್ಕುಗಳನ್ನು ಸಾಲ ವಸೂಲಾತಿ ಮಾಡುವ ಸಂದರ್ಭದಲ್ಲಿ ಆರೋಪಿತರು ನೀಡಿರುತ್ತಾರೆ. ಯಾವ ದಿನಾಂಕದಂದು ನಾವು ವಸೂಲಿ ಮಾಡಲು ಆರೋಪಿತರ ಬಳಿ ಹೋಗಿದ್ದೆವು ಎಂದು ನಿಖರವಾದ ದಿನಾಂಕ ಹೇಳಲು ಬರುವುದಿಲ್ಲ. ನಾವು ಕೊನೆಯ ಬಾರಿ ದಿನಾಂಕ

29.01.2019 ರಂದು ಆರೋಪಿತರ ಬಳಿ ಸಾಲ ವಸೂಲಾತಿಗೆ ಹೋಗಿದ್ದೆವು. ಸದರಿ ಚೆಕ್ಕುಗಳನ್ನು ನಮ್ಮ ಬ್ಯಾಂಕಿನ ಹಿಂದಿನ ಮ್ಯಾನೇಜರ್ ಬರೆದಿರುತ್ತಾರೆ. ಸದರಿ ಚೆಕ್ಕುಗಳನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಮ್ಯಾನೇಜರ ಹೆಸರು ನೆನಪಿಲ್ಲ. ಸದರಿ ಚೆಕ್ಕುಗಳನ್ನು ಯಾರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲದಿದ್ದರಿಂದ ನಾನು ನೆನಪಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

05. ಸದರಿ ಸಾಲ ವಸೂಲಾತಿಗಾಗಿ ನಾನು ಹಾಗೂ ನಮ್ಮ ಆಗಿನ ಮ್ಯಾನೇಜರ್ ಹೋಗಿದ್ದೆವು. ಸದರಿ 1 ನೇ ಆರೋಪಿ ಕೆ.ವಿ.ಜಿ. ಬ್ಯಾಂಕಿಗೆ ಸಂಬಂಧಿಸಿದ ಚೆಕ್ಕನ್ನು ಹಾಗೂ 2 ನೇ ಆರೋಪಿ ಹೆಚ್.ಡಿ.ಎಫ್.ಸಿ ಬ್ಯಾಂಕಿಗೆ ಸಂಬಂಧಿಸಿದ ಚೆಕ್ಕನ್ನು ನೀಡಿರುತ್ತಾರೆ. ಸದರಿ ಚೆಕ್ಕುಗಳ ಮೇಲೆ ದಿನಾಂಕಃ 29.01.2019 ಎಂದು ನಮ್ಮ ಬ್ಯಾಂಕಿನ ಮ್ಯಾನೇಜರ್ ನಮೂದಿಸಿರುತ್ತಾರೆ. ಸದರಿ ನಿಪಿ-1 ರ ಮೇಲಿರುವ ಸಹಿ 1 ನೇ ಆರೋಪಿಯದ್ದು. ಸದರಿ ನಿಪಿ-1 ರ ಮೇಲೆ ಸಹಿಯನ್ನು 1 ನೇ ಆರೋಪಿ ಮಾಡಿಲ್ಲ ಅದನ್ನು ನಾವೇ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ 2 ನೇ ಆರೋಪಿ ತನ್ನ ಸಹಿಯನ್ನು ಯಾವ ರೀತಿ ಮಾಡಿರುತ್ತಾನೆ ಎಂದು ನಾನು ನೋಡಿದರೆ ಹೇಳಬಲ್ಲೆ. ನೋಡದೇ ಹೇಳಲಾಗುವುದಿಲ್ಲ. 2 ನೇ ಆರೋಪಿ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡಿರುತ್ತಾನೆ ಅಥವಾ ಕನ್ನಡ ಭಾಷೆಯಲ್ಲಿ ಸಹಿ ಮಾಡಿರುತ್ತಾನೆ ಎಂದು ನನಗೆ ನೆನಪಿಲ್ಲ. ಸದರಿ ನಿಪಿ-1 ಮತ್ತು 2 ರ ಮೇಲಿರುವ ಸಹಿ ಆರೋಪಿ 1 ಮತ್ತು 2 ರವರದ್ದು ಅನುಕ್ರಮವಾಗಿ ಅಲ್ಲ ಎಂದರೆ ಸರಿಯಲ್ಲ. ಅವುಗಳನ್ನು ನಾವು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

06. ದೂರುದಾರ ಸೊಸೈಟಿ ಯಾವ ಸಾಲಿನಲ್ಲಿ ದಿವಾಳಿ ಆಗಿರುತ್ತದೆ ಎಂದರೆ ಸಾಕ್ಷಿ 2020-21 ನೇ ಸಾನಲಿನಲ್ಲಿ ಹಿಂದಿನ ಮ್ಯಾನೇಜರ್ ಹಣ ದುರುಪಯೋಗ ಪಡಿಸಿಕೊಂಡಿದ್ದು ಅದನ್ನು ಬಿಟ್ಟರೇ ದಿವಾಳಿ ಆಗಿಲ್ಲ ಎನ್ನುತ್ತಾರೆ. ಸಾಲ ಪಡೆಯುವ ಸಮಯದಲ್ಲಿ ಆರೋಪಿತರು ನೀಡಿರುವ ಚೆಕ್ಕುಗಳು ನಮ್ಮ ಬಳಿ ಇಲ್ಲ. ಸಾಕ್ಷಿ ಮುಂದುವರೆದು ಈ ಪ್ರಕರಣದಲ್ಲಿ ಹಾಜರು ಪಡಿಸಿದ ಚೆಕ್ಕುಗಳು ಸಾಲ ವಸೂಲಾತಿ ಸಮಯದಲ್ಲಿ ನೀಡಿದ ಚೆಕ್ಕುಗಳು ಎನ್ನುತ್ತಾರೆ. 1 ಮತ್ತು 2 ನೇ ಆರೋಪಿತರು ರೂ.2,00,000/- ಸಾಲ ಪಡೆದಿದ್ದರು. ಸದರಿ ಆ ಬಗ್ಗೆ ದೂರಿನಲ್ಲಿ

ನಮೂದಿಸಲಾಗಿದೆ. ಸದರಿ 1 ಮತ್ತು 2 ನೇ ಆರೋಪಿತರಿಗೆ ರೂ.2,00,000/- ಸಾಲ ನೀಡಿದ್ದೇವು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ದೂರುದಾರ ಸೊಸೈಟಿಯಿಂದ ಯಾವುದೇ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರು ಯಾವುದೇ ಸಾಲವನ್ನು ನಮ್ಮ ಸೊಸೈಟಿಯಿಂದ ಪಡೆಯದೇ ಇದ್ದರೂ ಸಹ ಸದರಿ ನಮ್ಮ ಸೊಸೈಟಿಯ ಹಣ ದುರುಪಯೋಗವಾದ್ದರಿಂದ ಆರೋಪಿತರು ವಿರುದ್ಧ ಅವರಿಗೆ ಸಂಬಂಧಿಸಿದ ಚೆಕ್ಕುಗಳು ನಮ್ಮ ಸೊಸೈಟಿಯಲ್ಲಿ ಇದ್ದುದ್ದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಬಾಬ್ತು ಎಲ್ಲ ಸಾಲವನ್ನು ತೀರಿಸಿದ್ದರೂ ಸಹ ಅವರು ಸಾಲ ಪಡೆಯುವ ಸಮಯದಲ್ಲಿ ನೀಡಿದ ಚೆಕ್ಕುಗಳನ್ನು ಅವರಿಗೆ ಹಿಂತಿರುಗಿಸದೇ ಸದರಿ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

06. ಸದರಿ ಚೆಕ್ಕುಗಳನ್ನು ನಗಧಿಕರಣಕ್ಕಾಗಿ ಕೆ.ಸಿ.ಸಿ ಬ್ಯಾಂಕ್ ಬ್ಯಾಡಗಿ ಶಾಖೆಗೆ ಸಲ್ಲಿಸಿದ್ದೆವು. ಕೆ.ಸಿ.ಸಿ ಬ್ಯಾಂಕ್ ಬ್ಯಾಡಗಿ ರವರು ಸಾಲವನ್ನು ನಮ್ಮ ಸೊಸೈಟಿಗಳ ಮೂಲಕ ನೀಡುತ್ತಾರೆ ಎಂದರೆ ಸರಿ. ನಮ್ಮ ಬ್ಯಾಂಕಿನ ಮುಖ್ಯ ಕಚೇರಿ ಕೆ.ಸಿ.ಸಿ ಬ್ಯಾಂಕ್ ಆದ್ದರಿಂದ ಸದರಿ ಬ್ಯಾಂಕಿನಿಂದ ಅಧಿಕಾರ ಪತ್ರ ಪಡೆಯದ ಹೊರತು ನನಗೆ ಈ ಪ್ರಕರಣ ದಾಖಲಿಸಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸದರಿ 1 ಮತ್ತು 2 ನೇ ಆರೋಪಿತರು ಯಾವುದೇ ಸಾಲ ಪಡೆಯದೇ ಇದ್ದರೂ ಸಹ ಆರೋಪಿತ ಬಾಬ್ತು ನಮ್ಮ ಸೊಸೈಟಿಯಲ್ಲಿ ಇದ್ದ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೆ.ಸರಿ ಇದೆ.

**Sd/-**
ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.